**ದಿನಾಂಕ: 18.12.2021 ರಂದು 11–00 ಗಂಟೆಗೆ ಡಾ. ಸುರೇಶ್, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್–179 (ಶಾಖಾಂಬರಿನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್–179ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 179ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಜೆ.ಪಿ.ನಗರ ಬೆಸ್ಕಾಂ ಅಭಿಯಂತರರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| ಸದಸ್ಯರುಗಳು | ಅರಣ್ಯ ಸಂರಕ್ಷಣಾಧಿಕಾರಿಗಳು |
| ಸದಸ್ಯರುಗಳು | ಬೀದಿ ದೀಪ ನಿರ್ವಹಣಾ ಅಭಿಯಂತರರು |
| ಸದಸ್ಯರುಗಳು | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| ಸದಸ್ಯರುಗಳು | ರಸ್ತೆ ಮೂಲಭೂತ ಸೌಕರ್ಯ (ದಕ್ಷಿಣ) |
| ಸದಸ್ಯರುಗಳು | ಯೋಜನೆ (ದಕ್ಷಿಣ) |
| ಸದಸ್ಯರುಗಳು | ಠಾಣಾಧಿಕಾರಿಗಳು, ನ್ಯಾಯ ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ |
| ಸದಸ್ಯರುಗಳು | ಬೃಹತ್ ನೀರುಗಾಲುವೆ ಅಭಿಯಂತರರು |
| ಸದಸ್ಯರುಗಳು | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| ಸದಸ್ಯರುಗಳು | ನಾಗರೀಕ ಕಲ್ಯಾಣ ಸಂಘ |

## :ನಡಾವಳಿಯ ವರದಿ:

- ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ಅನುಷಾ .ಎ.ಎಂ. ಸಹಾಯಕ ಇಂಜಿನಿಯರ್ ವಾರ್ಡ್ 179 ಶಾಖಾಂಬರಿನಗರ, ಜೆ.ಪಿ.ನಗರ ಉಪವಿಭಾಗ ರವರು ಮಾತನಾಡುತ್ತಾ ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- ವಾರ್ಡ್ ಸಂಖ್ಯೆ 179 ಶಾಖಾಂಬರಿನಗರ 46ನೇ ಅಡ್ಡರಸ್ತೆ, ಜಯನಗರ ಇಲ್ಲಿ ಬೀದಿ ದೀಪಗಳು ದುರಸ್ಥಿಗೊಂಡಿದ್ದು, ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಸೂಚಿಸುವಂತೆ ಚರ್ಚಿಸಲಾಯಿತು.
- ಜೈನ್ ಪ್ರಕೃತಿ ಹತ್ತಿರದ ಗೇಟಿನ ಮುಂಭಾಗದ ಪಾದಚಾರಿ ರಸ್ತೆಯನ್ನು ಸರಿಪಡಿಸಲು ರೋಡ್ ಇನ್‌ಫ್ರಾ (ದಕ್ಷಿಣ) ರವರಿಗೆ ಸೂಚಿಸುವಂತೆ ಕೋರಲಾಯಿತು.
- ಶಾಖಾಂಬರಿನಗರ ವ್ಯಾಪ್ತಿಯ 40ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆಯಲ್ಲಿನ ರಸ್ತೆಗಳು ಗುಂಡಿ ಬಿದ್ದಿದ್ದು, ಸದರಿ ಗುಂಡಿಗಳು ಮುಚ್ಚಲು ಕ್ರಮ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಲಾಯಿತು.
- 39ನೇ ಅಡ್ಡರಸ್ತೆ, 8ನೇ ಬಡಾವಣೆ ಜಯನಗರ, ಸಹಸ್ರ ಹಾಸ್ಪಿಟಲ್ ಹತ್ತಿರ ಮರದ ರೆಂಬೆ-ಕೊಂಬೆಗಳನ್ನು ಕತ್ತರಿಸುವಂತೆ ಅರಣ್ಯ ಇಲಾಖೆರವರಿಗೆ ಸೂಚಿಸುವಂತೆ ಚರ್ಚಿಸಲಾಯಿತು.
- 46ನೇ ಅಡ್ಡರಸ್ತೆಯಲ್ಲಿ ಕಸ ಗುಡಿಸುವವರು ಇಲ್ಲದ ಕಾರಣ, ಸಂಬಂಧಪಟ್ಟ ಇಲಾಖೆಯಿಂದ ಪೌರಕಾರ್ಮಿಕರನ್ನು ಒದಗಿಸುವಂತೆ ಕೋರಲಾಯಿತು.

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಇದೇ ರೀತಿಯಾಗಿ ಮಾಸಿಕ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಜೆ.ಪಿ.ನಗರ) ಉಪವಿಭಾಗದ ಶ್ರೀಮತಿ ಅನುಷಾ .ಎ.ಎಂ. ಸಹಾಯಕ ಇಂಜಿನಿಯರ್ ವಾರ್ಡ್ 179 ಶಾಖಾಂಬರಿನಗರ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ವಾರ್ಡ್ ಸಮಿತಿ ಅಧ್ಯಕ್ಷರು**<br>**ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ**<br>**ವಾರ್ಡ್ ನಂ. 179 ಶಾಖಾಂಬರಿನಗರ** | **ಸದಸ್ಯ ಕಾರ್ಯದರ್ಶಿ ಹಾಗೂ**<br>**ಸಹಾಯಕ ಅಭಿಯಂತರರು ವಾರ್ಡ್ 179**<br>**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** |